ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ

ಚನ್ನಪಟ್ಟಣ.

CC No 367/2017

PW-1

**ದಿನಾಂಕ 01.09.2023 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಎಂ ಕೆ ವಕೀಲರಿಂದಃ**

ನಿಪಿ-7 ರ ನಾನು ಹಾಜರುಪಡಿಸಿರುವ ನೋಟೀಸ್ ನಲ್ಲಿ ಯಾರಿಗೆ ನೋಟೀಸ್ ಅನ್ನು ಕಳುಹಿಸುತ್ತಿದ್ದೇನೆಂದು ವಿಳಾಸ ನಮೂದು ಇಲ್ಲ ಎಂದರೆ ಹೌದು. ನಿಪಿ-9 ರ ಲ್ಲಿ ಅಂಚೆ ಇಲಾಖೆಯವರು ಹಾಕುವ ರೆಫರೆನ್ಸ್ ನಂಬರ್ ನ ಸ್ಟಿಕ್ಕರ್ ಇಲ್ಲ, ಸಹಿ ಇಲ್ಲ, ಸೀಲು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನಾನು ನೋಟೀಸ್ ಜಾರಿ ಮಾಡಿರುತ್ತೇನೆಂದು ಹೇಳಿರುವುದು ಸುಳ್ಳು ಆದರೆ ನಾನು ಆರೋಪಿಗೆ ಯಾವುದೇ ನೋಟೀಸ್ ಅನ್ನು ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-10 ರ ಪತ್ರವನ್ನು ಎಲ್ಲಿ, ಎಷ್ಟೊತ್ತಿಗೆ ಬರೆಯಲಾಯಿತು ಎಂದು ನನಗೆ ಗೊತ್ತಿಲ್ಲ ಕಾರಣ ಸದರಿ ಪತ್ರವನ್ನು ಬರೆದು ಸುಮಾರು 8 ವರ್ಷಗಳಾಗಿವೆ. ನಮ್ಮ ಮನೆಯಲ್ಲಿ ಟೈಪಿಂಗ್ ಮಿಷನ್ ಇಲ್ಲ. ಸದರಿ ಪತ್ರ ಬರವಣಿಗೆ ಆದಾಗ ನಾನು ಇದ್ದೆ. ಸದರಿ ಪತ್ರವನ್ನು ನನ್ನ ಸಮ್ಮುಖದಲ್ಲಿ ಬೆರಳಚ್ಚು ಮಾಡಿಸಿಲ್ಲ ಆದರೆ ಅದನ್ನು ಆರೋಪಿಯೇ ಟೈಪ್ ಮಾಡಿಸಿ ತಂದಿರುತ್ತಾರೆ. ಸದರಿ ನಿಪಿ-10 ರ ಸ್ಟಾಂಪ್ ಪೇಪರ್ ಅನ್ನು ಯಾರಿಗೆ ಬರೆದುಕೊಡಲಾಗಿದೆ ಎಂದು ನಮೂದು ಇಲ್ಲ ಅದನ್ನು ನಡುಕಿರೆಗೌಡರವರಿಗೆ ಕೊಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಹೆಸರಿನಲ್ಲಿ ಕೆನರಾ ಬ್ಯಾಂಕ್ , ಕೋಡಂಬಳ್ಳಿಯಲ್ಲಿ ಮತ್ತು ಮಳೂರಿನಲ್ಲಿ ಎಸ್ ಬಿ ಐ

ಖಾತೆ ಇದೆ. ಸದರಿ 2 ಬ್ಯಾಂಕ್ ಖಾತೆಗಳು ರನ್ನಿಂಗ್ ಇದೆ. ನಾನು ಸದರಿ ಬ್ಯಾಂಕಿನ ಖಾತೆಗಳ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 5 ರಲ್ಲಿ ಹೇಳಿದ 2 ಲಕ್ಷ ರೂಪಾಯಿ ಹಣವನ್ನು ನಾನು ಇಟ್ಟಿಗೆ ಮಾರಾಟದಿಂದ ಬಂದ ಹಣವನ್ನು ಯಾರೋ ಒಬ್ಬರು ತಂದು ಕೊಟ್ಟಿದ್ದರು ಅದನ್ನು ನಾನು ನನ್ನ ಯಜಮಾನರಿಗೆ ಹೇಳಿ ಆರೋಪಿಗೆ ಕೊಟ್ಟಿರುತ್ತೇನೆ. ವನ್ನರುತಮ್ಮ ಬಿಕ್ಸ್ ಅಂತ ಇಟ್ಟಿಗೆ ಪ್ಯಾಕ್ಟರಿಯ ವ್ಯವಹಾರಕ್ಕೆ ಸಂಬಂದಪಟ್ಟಂತೆ ಪ್ರತ್ಯೇಕವಾಗಿ ಕೋಡಂಬಳ್ಳಿ ಶಾಖೆಯ ಕೆನರಾ ಬ್ಯಾಂಕ್ ನಲ್ಲಿ ನಡೆಯುತ್ತಿದೆ ಎಂದರೆ ಇಲ್ಲ. ವನ್ನರುತಮ್ಮ ಬಿಕ್ಸ್ ನನ್ನ ಯಜಮಾನರ ಮಾಲೀಕತ್ವದ ಬ್ರಿಕ್ಸ್ ಆಗಿರುತ್ತದೆ. ಸದರಿ ಇಟ್ಟಿಗೆ ಪ್ಯಾಕ್ಟರಿಯ ಹೆಸರಿನಲ್ಲಿಯೇ ಕೋಡಂಬಳ್ಳಿ ಶಾಖೆಯ ಕೆನರಾ ಬ್ಯಾಂಕ್ ನಲ್ಲಿ ಅಕೌಂಟ್ ನಂಬರ್ 0497261000031 ರ ಖಾತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬ್ಯಾಂಕ್ ಅಕೌಂಟ್ ಬಿಸಿನೆಸ್ ಅಕೌಂಟ್ ಆಗಿದ್ದು 2014 ಜನವರಿಯಿಂದ ಮಾರ್ಚ್ 31 ರವೆರೆಗೆ 1,52,000/- ರೂಪಾಯಿ ವ್ಯವಹಾರ ಆಗಿದೆ 3 ಸಾವಿರ ರೂಪಾಯಿ ಮಾತ್ರ ವಿತ್ ಡ್ರಾ ಮಾಡಿರುತ್ತಾರೆಂದರೆ ಸದರಿ ಅಕೌಂಟ್ ಗೂ ಈ ಕೇಸಿಗೂ ಯಾವುದೇ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಯಾವುದೇ ಸಾಲವನ್ನು ಕೊಟ್ಟಿಲ್ಲ ಮತ್ತು ಯಾವುದೇ ಇಟ್ಟಿಗೆ ಪ್ಯಾಕ್ಟರಿಯಲ್ಲಿ ಹಣ ಇರಲಿಲ್ಲ ನನಗೆ ಅಷ್ಟು ಹಣವನ್ನು ಕೊಡುವ ಆರ್ಥಿಕ ಸಾಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಯುವ ಸಮಯದಲ್ಲಿ ನನಗೆ ಕೊಟ್ಟಿದಂತಹ ಹಣವನ್ನು ಇಟ್ಟುಕೊಂಡಿರುತ್ತೇನೆ. ನನ್ನ ತಂದೆ 1998 ರಲ್ಲಿ ತೀರಿಕೊಂಡಿರುತ್ತಾರೆ. ನಾನು ಖಾತೆ ಹೊಂದಿದ ಬ್ಯಾಂಕಿನಲ್ಲಿ ಜನವರಿ 2014 ರಿಂದ ಮಾರ್ಚ್ 2014 ರವರೆಗೆ 10-15 ಸಾವಿರ ರೂಪಾಯಿ ಇತ್ತು. ನಾನು ನಗದು ಮೂಲಕ ಯಾವುದೇ ಹಣವನ್ನು ಇಟ್ಟುಕೊಂಡಿರಲಿಲ್ಲ, ನಾನು ಯಾವುದೇ ಸಾಲವನ್ನು ಆರೋಪಿಗೆ ಕೊಟ್ಟಿಲ್ಲ ನಡುಕೆರಿಗೌಡ ರವರಿಗೆ ಕೊಟ್ಟಂತಹ ಚೆಕ್ ಗಳನ್ನು ನನ್ನ ಯಜಮಾನರು ನನಗೆ ಕೊಟ್ಟು ನನ್ನಿಂದ ಸುಳ್ಳು ಪಿರ್ಯಾದನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ನಾನು ಯಾವುದೇ ಸಾಲವನ್ನು ಆರೋಪಿಗೆ ಕೊಡದೇ ಇದ್ದುದ್ದರಿಂದ ಅವರು ನನಗೆ ಯಾವುದೇ ಸಾಲವನ್ನು ಕೊಡುವ ಬಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

2014 ನೇ ಇಸವಿಯಿಂದಲೂ ನಾನು ಒಡವೆಗಳನ್ನು ಬ್ಯಾಂಕಿನಲ್ಲಿಟ್ಟು ಸಾಲವನ್ನು ತೆಗೆದುಕೊಂಡಿರುತ್ತೇನೆ. ಸುಮಾರು 5 ಲಕ್ಷದವರೆಗೂ ನಾನು ಸಾಲ ಪಡೆದುಕೊಂಡಿರುತ್ತೇನೆ. ಜನವರಿ 2014 ರಲ್ಲಿ ಸದರಿ ಒಡವೆಯ ಸಾಲ ಇತ್ತು. ಸದರಿ ಒಡವೆ ಸಾಲಕ್ಕೆ ಬಡ್ಡಿ ಕಟ್ಟುತ್ತಾ ಇದ್ದೆ. ನಾನೇ ಸಾಲಗಾರರಾಗಿದ್ದರಿಂದ ಆರೋಪಿಗೆ ಸಾಲ ಕೊಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ನನ್ನ ಯಜಮಾನರಿಂದ ಬಂದಂತಹ ಹಣವನ್ನು ಕೊಟ್ಟಿರುತ್ತೇನೆ. ನನ್ನ ಯಜಮಾನರಿಗೆ ಎಷ್ಟು ಬ್ಯಾಂಕ್ ಅಕೌಂಟ್ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಽಯಜಮಾನರ ಇಟ್ಟಿಗೆ ಪ್ಯಾಕ್ಟರಿ ಲೋನ್ ಹಣ ಕಡಿತಗೊಳ್ಳುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದುದ್ದರಿಂದ ನನಗೆ ಸಾಲದ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಯಜಮಾನರು ಹಾಗೂ ನಡುಕೆರೆಗೌಡರವರು ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**